# ಅಪರೂಪದ ವೀರಗಲ್ಲು

ಈ ವೀರಗಲ್ಲು ಮುದ್ದೆಬಿಹಾಳದ ತಾಲ್ಲೂಕಿನ ಯಲಗೂರು ಗ್ರಾಮದ ಹನುಮಂತದೇವರ ದೇವಸ್ಥಾನದ ಹತ್ತಿರವಿದೆ. ಪ್ರಕೃತಿಯ ನಿತ್ಯ ದಾಳಿಯಿಂದ, ಜನರ ನಿರ್ಲಕ್ಷದಿಂದ ಶಿಥಿಲಗೊಳ್ಳುತ್ತಿದೆ. ಅತ್ಯಂತ ವೈಶಿಷ್ಟ್ಯದಿಂದ ಕೂಡಿದ ಈ ವೀರಗಲ್ಲು ಇತಿಹಾಸದ ಪ್ರೇಮಿಗಳಿಗೆ ಮಾರ್ಗದರ್ಶಿಯಾಗಿದೆ. ಕುದುರೆ ಸವಾರರೊಂದಿಗೆ ಇಬ್ಬರು ಯೋಧರು ಸೆಣಸಿ ವೀರಮರಣವನ್ನು ಹೊಂದಿದ ಸನ್ನಿವೇಶವನ್ನು ಇದು ಸಾರುತ್ತಿದೆ. ಇದು ಬಹುಶಃ ವಿಜಯನಗರ ಅರಸರ ಕಾಲದ್ದಿರಬಹುದು.

**-ಯು.ಜೆ.ಕುಲಕರ್ಣಿ, ವಿಜಯಪುರ**





# ಅಮೃತ ಹಣ್ಣು

ಮಧುಮೇಹಿಗಳಿಗೆ ಆಯುರ್ವೇದೀಯ ಅಮೃತಬಳ್ಳಿ ನಿತ್ಯ ಜೀವನ ಸಂಗಾತಿ. ಇದರ ಎಲೆ, ಕಾಂಡ, ಬೇರು ಹಾಗೂ ಹಣ್ಣುಗಳು ಕೂಡ ಔಷಧಯುಕ್ತವೇ ಆಗಿದ್ದು, ಬೆಳೆಸಿದರೆ ಮನೆ ಅಂಗಳದ ಯಾವುದೇ ಆಸರೆಗಾದರೂ ಸುತ್ತಿಕೊಂಡು ಬೆಳೆಯುತ್ತದೆ. ನೆಲ, ನೀರು ಸಂಪರ್ಕವಿಲ್ಲದಿದ್ದರೂ ವಾತಾವರಣದ ತೇವಾಂಶವನ್ನು ಹೀರಿಕೊಂಡೇ ಕೆಲ ಕಾಲ ಬದುಕುವ ಸಾಮರ್ಥ್ಯ ಈ ಬಳ್ಳಿಗಿದೆ.

ಈ ಬಳ್ಳಿಗೆ ನೆಲದ ಸಂಪರ್ಕವಿಲ್ಲದಾಗ ಎಷ್ಟೇ ಅಂತರದಿಂದಲೂ ತಂತಿಯಂತಹ ಬಿಳಿಲು ಬೇರುಗಳನ್ನು ಭೂಮಿಗೆ ಬಿಟ್ಟು ಪುನಃ ಚಿಗುರೊಡೆಯುತ್ತದೆ. ಅಂತಹ ಒಂದು ಅಭಾವ ಸಂದರ್ಭದಲ್ಲೇ ತನ್ನ ಸಂತಾನವನ್ನು ಉಳಿಸಿಕೊಳ್ಳಲು ಅಪರೂಪವಾಗಿ ಹೂ ಹಣ್ಣುಗಳನ್ನು ಬಿಡುತ್ತದೆ. ಹಸಿರಾಗಿರುವ ಇದರ ಕಾಯಿಗಳು ಬೆಳೆದಂತೆ ಹಳದಿ ಆಮೇಲೆ ಕೆಂಪಾಗಿ ಪಶು– ಪಕ್ಷಿಗಳ ಆಹಾರವಾಗಿ ಬೀಜ ಪ್ರಸಾರ ಮಾಡಿಕೊಳ್ಳುತ್ತದೆ. ಹೇಗಿದೆ ನೋಡಿ ಬದುಕಿನ ಹೋರಾಟ.

**-ಎಸ್. ಓಂಕಾರಯ್ಯ ತವನಿಧಿ, ದಾವಣಗೆರೆ**

# ಪರಿಸರ ಸ್ನೇಹಿ ಬ್ಯಾಟರಿ ರಿಕ್ಷಾ

ಎದುರು ಬದರಿನ ಸೀಟುಗಳಲ್ಲಿ ಇಬ್ಬರು ಪ್ರಯಾಣಿಕರು ಕುಳಿತಿರುವ ಈ ವಾಹನ ಕಾಣಸಿಕ್ಕಿದ್ದು ಉತ್ತರ ಪ್ರದೇಶದ ಮಥುರಾದಲ್ಲಿ. ಮಥುರಾ ಶ್ರೀ ಕೃಷ್ಣನ ಜನ್ಮಸ್ಥಳವೆಂದು ಪ್ರಸಿದ್ಧಿ. ಕರ್ನಾಟಕದಲ್ಲಿ ಸಾಮಾನ್ಯವಾಗಿ ಕಾಣಸಿಗುವ ಪೆಟ್ರೋಲ್/ ಡೀಸೆಲ್/ ಗ್ಯಾಸ್ ಆಟೋರಿಕ್ಷಾಗಳಿಗಿಂತ ಈ ಆಟೋರಿಕ್ಷಾ ತೀರ ಭಿನ್ನ. ಈ ರಿಕ್ಷಾ ನಡೆಯುವುದು ಸಂಪೂರ್ಣವಾಗಿ ರೀಚಾರ್ಜ್ ಮಾಡಬಹುದಾದ ಬ್ಯಾಟರಿಗಳಿಂದ. ಆರು ಜನರಿಗೆ ಆಸನ ವ್ಯವಸ್ಥೆ ಇದೆ. ಈ ಬ್ಯಾಟರಿ ರಿಕ್ಷಾದ ಬೆಲೆ ಸುಮಾರು ರೂ. 1.20 ಲಕ್ಷ. ಮಥುರಾದಂತೆ ಉ.ಪ್ರ.ದ ವಾರಣಾಸಿ (ಕಾಶಿ) ಯಂತಹ ಧಾರ್ಮಿಕ ಕ್ಷೇತ್ರಗಳಲ್ಲೂ ಈ ಬ್ಯಾಟರಿ ರಿಕ್ಷಾ ಬಳಕೆ ಜಾಸ್ತಿ. ಈ ರಿಕ್ಷಾ ಕರ್ನಾಟಕಕ್ಕೂ ಬಂದರೆ ಹೊಗೆ ಇಲ್ಲದ ಈ ಗಾಡಿಗೆ ಬೇಡಿಕೆ ಜಾಸ್ತಿಯಾಗಬಹುದು.

**-ನಾರಾಯಣ ಯಾಜಿ, ಶಿರಾಲಿ**

